**<u>ಅಸಲು ದಾವಾ ಸಂಖ್ಯೆ: - 137/2023</u>** **ಪಿ.ಡಬ್ಲ್ಯೂ:-1**

ದಿನಾಂಕಃ **13-08-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲು :- 1 ನೇ ಪ್ರತಿವಾದಿ ಪರ ವಕೀಲರಿಂದ :-</u>**

ನನ್ನ ಹೆಸರು ಮಂಜಮ್ಮ. ನನ್ನ ತಂದೆಯ ಹೆಸರು ರಾಮಚಂದ್ರಪ್ಪ. ನಾನು ಮತ್ತು ಪ್ರತಿವಾದಿಗಳು ಒಟ್ಟು ಕುಟುಂಬದವರಾಗಿದ್ದರಿಂದ ದಾವಾ ಆಸ್ತಿಗಳಲ್ಲಿ ಭಾಗಾಂಶ ಬೇಕೆಂದು ಕೋರಿ ದಾವೆಯನ್ನು ಸಲ್ಲಿಸಿದ್ದೆನು. ಈ ದಾವೆಯನ್ನು ಸರ್ವೇ ನಂ.103, 170 ಮತ್ತು 169 ಆಸ್ತಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಿದ್ದೆನು. ದಾವಾ ಆಸ್ತಿಗಳು ನಮ್ಮ ತಾಯಿಗೆ ಸೇರಿದ ಆಸ್ತಿಗಳಾಗಿರುತ್ತದೆ. ದಾವಾ ಆಸ್ತಿಗಳು ನಮ್ಮ ತಂದೆಯಿಂದ ನಮ್ಮ ತಾಯಿಯ ಹೆಸರಿಗೆ ಬಂದಿರುತ್ತವೆ. ನಾನು ಮತ್ತು ಪ್ರತಿವಾದಿಗಳನ್ನು ಹೊರತುಪಡಿಸಿ ನಮ್ಮ ತಂದೆ ತಾಯಿಯವರಿಗೆ ಯಶೋಧಮ್ಮ ಎಂಬ ಒಬ್ಬ ಮಗಳು ಇದ್ದರು ಅವರು ಮದುವೆಯಾಗದೇ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ತಂದೆಗೆ ಕೆಲವೊಂದು ಆಸ್ತಿಗಳು ಇರುತ್ತವೆ. ಆದರೆ ಸದರಿ ಆಸ್ತಿಗಳ ಸರ್ವೇ ನಂಬರ್ ನನಗೆ ಗೊತ್ತಿಲ್ಲ. ಉಳಿದ ಆಸ್ತಿಗಳಲ್ಲಿಯೂ ಸಹ ನನಗೂ ಮತ್ತು ಪ್ರತಿವಾದಿಗಳಿಗೆ ಸಮಾನವಾದ ಭಾಗಾಂಶದ ಹಕ್ಕು ಮತ್ತು ಹಿತಾಸಕ್ತಿ ಇದೆ ಎಂದರೆ ಸರಿ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.